ಶೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

(ಅ) 26

(ಆ) ಇಲ್ಲ

(ಇ) ಉದ್ಭವಿಸುವುದಿಲ್ಲ.

ಸಕಲೇಶಪುರ ಕ್ಷೇತ್ರಕ್ಕೆ ಸಬ್‌ಸ್ಟೇಷನ್ ಮಂಜೂರು

1890 (2523) ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಕಲೇಶಪುರ ಕ್ಷೇತ್ರಕ್ಕೆ ಎರಡು ಸಬ್ ಸ್ಟೇಷನ್ (66 ಕೆ.ವಿ) ಮಂಜೂರು ಮಾಡಲಾಗಿದೆಯೇ;

(ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗಿದೆ;

(ಇ) ಮಂಜೂರಾಗಿದ್ದಲ್ಲಿ ಇದು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶೀ ವೀರಕುಮಾರ್ ಪಾಟೀಲ್ (ಮಾನ್ಯ ಇಂಧನ ರಾಜ್ಯ ಸಚಿವರು)

(ಅ) ಇಲ್ಲ, ಕೇವಲ ಒಂದು 66 ಕೆ.ವಿ.ಸಬ್ ಸ್ಟೇಷನ್ನಿಗೆ ಮಾತ್ರ ಮಂಜೂರಾತಿ ನೀಡಲಾಗಿದೆ. ಸಕಲೇಶಪುರ ಕ್ಷೇತ್ರದ ಯಸಳೂರಿನಲ್ಲಿ ಒಂದು 66:11 ಕೆ.ವಿ. 6.3 ಎಂ.ವಿ.ಎ ಸಾಮರ್ಥ್ಯದ ವಿದ್ಯುತ್ ಸಬ್‌ಸ್ಟೇಷನ್ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ.

(ಆ) ಈ ಕೆಲಸಕ್ಕೆ ಅಕ್ಟೋಬರ್ 1997 ರಲ್ಲಿ ನಡೆದ ನಿಗಮದ ತಾಂತ್ರಿಕ ಸಮಿತಿಯ ಸಭೆಯಲ್ಲಿ ಅನುಮೋದನೆಯನ್ನು ಹಾಗೂ ಜೂನ್ 1999 ರಲ್ಲಿ ಈ ಕಾಮಗಾರಿಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗಿದೆ. ಗ್ರಾಮೀಣ ವಿದ್ಯುದೀಕರಣ ನಿಗಮವೂ ಸಹ ಈ ಕಾಮಗಾರಿಯ ನಿರ್ವಹಣೆಗಾಗಿ ಸಾಲ ಸೌಲಭ್ಯವನ್ನು ಮಂಜೂರು ಮಾಡಿರುತ್ತದೆ.

(ಇ) ಈಗಾಗಲೇ ಮಂಜೂರಾದ ವಿವರವಾದ ಯೋಜನಾ ವರದಿಯಂತೆ ಮಗ್ಗೆಯಿಂದ ಯಸಳೂರಿಗೆ 66 ಕೆ.ವಿ.ಯು ವಿದ್ಯುತ್ ಪ್ರಸರಣಾ ಮಾರ್ಗವನ್ನು ನಿರ್ಮಿಸಿ, ಯಸಳೂರಿನಲ್ಲಿ 66 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ನಿರ್ಮಿಸುವ ಪ್ರಸ್ತಾವನೆಯಾಯಿತು. ಆದರೆ ಈ ಮಾರ್ಗವು ಪ್ಲಾಂಟೇಷನ್ ಪ್ರದೇಶಗಳಲ್ಲಿ ಹಾದು ಹೋಗುತ್ತಿದ್ದುದರಿಂದಲೂ ಹಾಗೂ ಆರ್ಥಿಕವಾಗಿ ಉತ್ತಮವಾಗಿಲ್ಲದ್ದುದರಿಂದಲೂ ಈ ಪ್ರಸ್ತಾವನೆಯನ್ನು ಸ್ವಲ್ಪಮಟ್ಟಿಗೆ ಪರಿಷ್ಕರಿಸಿ ನೀರಾವರಿ ಇಲಾಖೆಯು ನಿರ್ಮಿಸುತ್ತಿರುವ ಅಡಕೆ ಬೊಮ್ಮನಹಳ್ಳಿಯಲ್ಲಿನ 66 ಕೆ.ವಿ. ವಿದ್ಯುತ್ ಉಪಕೇಂದ್ರದಿಂದ ಯಸಳೂರಿಗೆ 66 ಕೆ.ವಿ ಮಾರ್ಗವನ್ನು ನಿರ್ಮಿಸುವುದರ ಮೂಲಕ ಸದರೀ ಉಪಕೇಂದ್ರವನ್ನು ನಿರ್ಮಾಣ ಮಾಡಲು ಈಗ ಉದ್ದೇಶಿಸಲಾಗಿದೆ. ಇದಕ್ಕಾಗಿ ಪರಿಷ್ಕೃತ

ಯೋಜನಾ ವರದಿಯನ್ನು ಸಿದ್ಧಪಡಿಸಲಾಗುತ್ತಿದ್ದು ನಿಗಮದ ಕಾರ್ಪೋರೇಟ್ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸಲಾಗುವುದು. ಈಗಾಗಲೇ ಯಸಳೂರಿನಲ್ಲಿ ವಿತರಣಾ ಕೇಂದ್ರದ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯು ಲಭ್ಯವಿದೆ. ಈ ಕಾಮಗಾರಿಯನ್ನು ಟರ್ನ್‌ಕೀ ಆಧಾರದ ಮೇಲೆ ಕೈಗೊಳ್ಳಲು ಉದ್ದೇಶಿಸಿದೆ.

ಕೆ.ಪಿ.ಟಿ.ಸಿ.ಎಲ್.ನವರಿಂದ ಡಿ.ಎಸ್.ಎಲ್.ಎಂ. ಯೋಜನೆಯ ಅನುಷ್ಠಾನದ ಬಗ್ಗೆ

1892 (2348) ಶ್ರೀ ಶಿವರಾಮು ಬಿ. (ಗಂಡಸಿ):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕೆ.ಪಿ.ಟಿ.ಸಿ.ಎಲ್.ನವರಿಂದ ಡಿ.ಎನ್.ಎಲ್.ಎಂ. ಯೋಜನೆಗೆ ರಾಜ್ಯದ ಯಾವ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ?

ಶ್ರೀ ವೀರಕುಮಾರ ಪಾಟೀಲ್ (ಮಾನ್ಯ ಇಂಧನ ರಾಜ್ಯ ಸಚಿವರು)

(ಅ) ಕೆ.ಪಿ.ಟಿ.ಸಿ.ಎಲ್.ನವರಿಂದ ಡಿ.ಎಸ್.ಎಲ್.ಎಂ. ಯೋಜನೆಯಡಿಯಲ್ಲಿ ಈ ಕೆಳಕಂಡ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಗಿದೆ.

1. ಚನ್ನಪಟ್ಟಣ
2. ರಾಮನಗರ
3. ಆನೇಕಲ್
4. ದೇವನಹಳ್ಳಿ
5. ದೊಡ್ಡಬಳ್ಳಾಪುರ
6. ಮಾಗಡಿ
7. ನೆಲಮಂಗಲ
8. ಹೊಸಕೋಟೆ
9. ಬೆಂಗಳೂರು (ಉತ್ತರ)
10. ಚಿತ್ರದುರ್ಗ
11. ಹೊಳಲ್ಕೆರೆ
12. ಹೊಸದುರ್ಗ
13. ಹಿರಿಯೂರು